# ಮಹಿಳೆಯರಿಗೆ ಮತ್ತು ಮಕ್ಕಳಿಗೆ ಸರಕಾರದಿಂದ ಸಿಗುವ ಸೌಲಭ್ಯಗಳ ವಿವರ:

| ಕ್ರ ಸಂ. | ಸರಕಾರದ ಯೋಜನೆಗಳು | ಅರ್ಹತೆ ಮತ್ತು ಸೌಲಭ್ಯಗಳು | ಸಂಪರ್ಕಿಸಬೇಕಾದ ಇಲಾಖೆ/ಸಂಸ್ಥೆ ಹಾಗೂ ದೂರವಾಣಿ ಸಂಖ್ಯೆ |
|---|---|---|---|
| 1 | ಸಮಗ್ರ ಶಿಶು ಅಭಿವೃದ್ಧಿ ಯೋಜನೆ | 6 ತಿಂಗಳಿನಿಂದ 6 ವರ್ಷದವರೆಗಿನ ಮಕ್ಕಳಿಗೆ, ಬಾಣಂತಿಯರಿಗೆ, ಪ್ರಾಯ ಪೂರ್ವ ಬಾಲಕಿಯರಿಗೆ ಪೂರಕ ಪೌಷ್ಠಿಕ ಆಹಾರ, ಆರೋಗ್ಯ ಸೇವೆಗಳು. (ಹಾಲು, ಕಾಳು, ಧಾನ್ಯಗಳು) | ಸಂಬಂಧಪಟ್ಟ ಅಂಗನವಾಡಿ ಕೇಂದ್ರಗಳನ್ನು ಸಂಪರ್ಕಿಸಿ ಸೌಲಭ್ಯವನ್ನು ಪಡೆದುಕೊಳ್ಳಬಹುದು. |
| 2 | ಭಾಗ್ಯಲಕ್ಷ್ಮೀ ಯೋಜನೆ | ಬಿಪಿಎಲ್ ಕುಟುಂಬದಲ್ಲಿ ಜನಿಸುವ ಮೊದಲ ಇಬ್ಬರು ಹೆಣ್ಣು ಮಕ್ಕಳಿಗೆ ಆರೋಗ್ಯ ವಿಮೆ ಮತ್ತು 18 ವರ್ಷ ತುಂಬಿದ ನಂತರ ರೂ. 1 ಲಕ್ಷ ಮೊತ್ತ ಪಾವತಿ ಸೌಲಭ್ಯ. | ಸಂಬಂಧಪಟ್ಟ ಅಂಗನವಾಡಿ ಕೇಂದ್ರಗಳಲ್ಲಿ ಸ್ವ–ಸಹಾಯ ಸಂಘಗಳನ್ನು ಮಾಡಿಕೊಂಡು ಸವಲತ್ತುಗಳನ್ನು ಪಡೆದುಕೊಳ್ಳಬಹುದು. |
| 3 | ಸ್ತ್ರೀ ಶಕ್ತಿ ಯೋಜನೆ | ಮಹಿಳಾ ಸ್ವ–ಸಹಾಯ ಸಂಘಗಳಿಗೆ ಸರಕಾರದಿಂದ ಸುತ್ತು ನಿಧಿ, ತರಬೇತಿ, ಬಡ್ಡಿ ಸಹಾಯ ಧನ ಮತ್ತು ಪ್ರೋತ್ಸಾಹ ಧನ ವಿತರಣೆ. | ಸಂಬಂಧಪಟ್ಟ ಅಂಗನವಾಡಿ ಕೇಂದ್ರಗಳಲ್ಲಿ ಗುಂಪು ತರಬೇತಿ ನೀಡಲಾಗುತ್ತದೆ. |
| 4 | ಉದ್ಯೋಗಿನಿ ಯೋಜನೆ | ಮಹಿಳೆಯರು ಸ್ವಂತ ಉದ್ಯೋಗ ಕೈಗೊಳ್ಳಲು ಗರಿಷ್ಠ ರೂ 3 ಲಕ್ಷದವರೆಗೆ ಬ್ಯಾಂಕಿನಿಂದ ಸಾಲವನ್ನು ಪಡೆಯಬಹುದಾಗಿದೆ. ಪಡೆಯುವ ಸಾಲಕ್ಕೆ ಸಾಮಾನ್ಯ ವರ್ಗಕ್ಕೆ 30% ಮತ್ತು ಪ.ಜಾ/ಪ.ಪಂ ವರ್ಗಕ್ಕೆ 50% ರಷ್ಟು ಸಾಲದ ಮೇಲೆ ಸಬ್ಸಿಡಿ ನೀಡಲಾಗುತ್ತದೆ. | ಈ ಯೋಜನೆಗೆ CDPO ಕಛೇರಿಯನ್ನು ಸಂಪರ್ಕಿಸುವುದು.<br>ವಿಳಾಸ: ಪುತ್ತೂರು CDPO ಕಛೇರಿ CTO ಕಛೇರಿ ಎದುರುಗಡೆ ದರ್ಬೆ, ಪುತ್ತೂರು.<br>ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 08251–230388 |
| 5 | ಏಡ್ಸ್/ಹೆಚ್.ಐ.ವಿ. ಸೋಂಕಿತ/ಬಾಧಿತ ಮಕ್ಕಳ ವಿಶೇಷ ಪಾಲನಾ ಯೋಜನೆ | ಏಡ್ಸ್/ಹೆಚ್.ಐ.ವಿ. ಸೋಂಕಿತ/ಬಾಧಿತ ಮಕ್ಕಳ ಜೀವನ ಮಟ್ಟ ಉತ್ತಮಪಡಿಸಲು ಶಿಕ್ಷಣ ಒದಗಿಸುವ ಮೂಲಕ ಅವರನ್ನು ಸಬಲರನ್ನಾಗಿಸಲು ಆರೋಗ್ಯ ಸೇವೆ ಹಾಗೂ ಉತ್ತಮ ಪೌಷ್ಠಿಕ ಆಹಾರ ಒದಗಿಸುವುದರ ಮೂಲಕ ಸೋಂಕು ಉಲ್ಬಣವಾಗದಂತೆ ಮಾಡಲು ಅವರಿಗೆ ಆರ್ಥಿಕ ಸಹಾಯವನ್ನು ಕಲ್ಪಿಸುವ ಯೋಜನೆಯಾಗಿರುತ್ತದೆ. | ಈ ಯೋಜನೆಯ ಸವಲತ್ತನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕ DC ಕಛೇರಿ ಮಂಗಳೂರು ರವರನ್ನು ಸಂಪರ್ಕಿಸಿ ಪಡೆದುಕೊಳ್ಳಬಹುದು.<br>ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 0824–2440004 |
| 6 | ಸ್ವಾಧಾರ ಕೇಂದ್ರ ಮತ್ತು ಮಹಿಳೆಯರ ಅಲ್ಪಾವಧಿ ವಸತಿ ಗೃಹ | ಸಂಕಷ್ಟದಲ್ಲಿರುವ ಮಹಿಳೆಯರಿಗೆ ಮೂಲಭೂತ ಅವಶ್ಯಕತೆಗಳಾದ ಆಶ್ರಯ, ಪೋಷಣೆ ಮತ್ತು ರಕ್ಷಣೆಯ ಜೊತೆಗೆ ಮಾನಸಿಕ ಬೆಂಬಲ ಮತ್ತು ಕೌನ್ಸಿಲಿಂಗ್, ವೃತ್ತಿಪರ ಕೌಶಲ್ಯ ತರಬೇತಿ, ಮನೋವೈದ್ಯಕೀಯ, ಕಾನೂನು, ಪೋಲೀಸ್ ಮತ್ತು ಇತರ ನೆರವು ಹಾಗೂ ಕೌಟುಂಬಿಕ/ಸಾಮಾಜಿಕ ಪುನರ್ ವಸತಿ ಮತ್ತು ಅನುಸರಣಾ ಸೇವೆಯನ್ನು ಸ್ವಾಧಾರ ಕೇಂದ್ರದ ಮೂಲಕ ಒದಗಿಸಲಾಗುತ್ತದೆ. | ಈ ಸವಲತ್ತನ್ನು ಪ್ರಜ್ಞಾ ಸ್ವಾಧಾರ ಕೇಂದ್ರ ಪಳ್ನೀರು ಮಂಗಳೂರು ರವರನ್ನು ಸಂಪರ್ಕಿಸಿ ಪಡೆದುಕೊಳ್ಳಬಹುದು.<br>ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 0824–2432682 |

Scanned with CamScanner

| | | | |
|---|---|---|---|
| 7 | ಸಮಗ್ರ ಮದ್ಯ ವ್ಯಸನಿಗಳ ಪುನರ್ ವಸತಿ ಯೋಜನೆ | ಮದ್ಯವ್ಯಸನಿಗಳ ಮದ್ಯವರ್ಜನೆಗಾಗಿ ಶಿಬಿರಗಳು ಕಾರ್ಯ ನಿರ್ವಹಿಸುತಿವೆ. | ಕ್ಯಾಂಟೋಸ್ ಡಿ-ಎಡಿಕ್ಷನ್ ಸೆಂಟರ್ ಪತ್ರವೋ ಆಸ್ಪತ್ರೆಯ ಬಳಿ ದರ್ಬೆ, ಪುತ್ತೂರು. ಇವರನ್ನು ಸಂಪರ್ಕಿಸಬಹುದು. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 9164637665 |
| 8 | ಲಿಂಗತ್ವ ಅಲ್ಪ ಸಂಖ್ಯಾತರಿಗೆ ಪುನರ್ ವಸತಿ ಯೋಜನೆ | 1.ಲಿಂಗತ್ವ ಅಲ್ಪ ಸಂಖ್ಯಾತರು ಸ್ವಯಂ ಉದ್ಯೋಗ ಕೈಗೊಳ್ಳಲು 20 ಸಾವಿರ ರೂಪಾಯಿ ಪ್ರೋತ್ಸಾಹ ಧನ ನೀಡಲಾಗುತ್ತದೆ.<br>2. ಸ್ವ-ಸಹಾಯ ಗುಂಪು (5 ಜನರು) ಗರಿಷ್ಠ 1 ಲಕ್ಷ ರೂಪಾಯಿವರೆಗೆ ಪ್ರೋತ್ಸಾಹ ಧನ ನೀಡಲಾಗುತ್ತದೆ. | ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಜಿಲ್ಲಾ ಪಂಚಾಯತ್ ಕಛೇರಿ ಕೊಟ್ಟಾರ ಮಂಗಳೂರು. ರವರನ್ನು ಸಂಪರ್ಕಿಸಬಹುದು. |
| 9 | ಚೇತನ ಯೋಜನೆ | ಲೈಂಗಿಕ ವೃತ್ತಿ ನಿರತ ಮಹಿಳೆಯರಿಗೆ ಈಗಿನ ವೃತ್ತಿಯಿಂದ ಹೊರಬಂದು ಆಧಾಯೋತ್ಪನ್ನ ಚಟುವಟಿಕೆಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ನಿಗಮದಿಂದ 20 ಸಾವಿರ ರೂ. ಗಳ ಧನ ಸಹಾಯ ನೀಡಲಾಗುತ್ತದೆ. | ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಜಿಲ್ಲಾ ಪಂಚಾಯತ್ ಕಛೇರಿ ಕೊಟ್ಟಾರ ಮಂಗಳೂರು. ರವರನ್ನು ಸಂಪರ್ಕಿಸಬಹುದು. |
| 10 | ಸಮೃದ್ಧಿ ಯೋಜನೆ | ಬೀದಿ ಬದಿಯಲ್ಲಿ ಸಣ್ಣ ವ್ಯಾಪಾರ ನಡೆಸುತ್ತಿರುವ ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರಿಗೆ ಸಮೃದ್ಧಿ ಯೋಜನೆಯಡಿ ರೂ. 10 ಸಾವಿರ ರೂಪಾಯಿಗಳ ಪ್ರೋತ್ಸಾಹ ಧನ ನೀಡಲಾಗುತ್ತದೆ. | ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಜಿಲ್ಲಾ ಪಂಚಾಯತ್ ಕಛೇರಿ ಕೊಟ್ಟಾರ ಮಂಗಳೂರು. ರವರನ್ನು ಸಂಪರ್ಕಿಸಬಹುದು. |
| 11 | ಧನಶ್ರೀ | ಕರ್ನಾಟಕ ರಾಜ್ಯದಲ್ಲಿ ವಾಸಿಸುತ್ತಿರುವ 18 ರಿಂದ 60 ವಯೋಮಿತಿಯ ಹೆಚ್‌ಐವಿ ಸೋಂಕಿತ ಮಹಿಳೆಯರಿಗೆ ಶೇಕಡಾ 4 ರ ಬಡ್ಡಿ ಧರದಲ್ಲಿ 40 ಸಾವಿರ ಸಾಲ, 10 ಸಾವಿರ ಸಹಾಯಧನ ನೀಡಲಾಗುತ್ತದೆ. | ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಜಿಲ್ಲಾ ಪಂಚಾಯತ್ ಕಛೇರಿ ಕೊಟ್ಟಾರ ಮಂಗಳೂರು. ರವರನ್ನು ಸಂಪರ್ಕಿಸಬಹುದು. |
| 12 | ಕೌಶಲ್ಯಾಭಿವೃದ್ಧಿ ಯೋಜನೆ | ವಿಕಲ ಚೇತನಾ, ಅಸಹಾಯಕ ಮಹಿಳೆಯರು ಹಾಗೂ ಇತರ ಮಹಿಳೆಯರಿಗೆ ಕೌಶಲ್ಯ ತರಬೇತಿಯನ್ನು ನೀಡಿ ಉದ್ಯಮಶೀಲತೆಯನ್ನು ಬೆಳೆಸುವುದಕ್ಕೋಸ್ಕರ ತರಬೇತಿಗಳನ್ನು ರುಡ್‌ಸೆಟ್ ಸಂಸ್ಥೆ, ಬ್ಯಾಂಕ್ ಪ್ರಾಯೋಜಿತ ತರಬೇತಿ ಸಂಸ್ಥೆ, ಸರಕಾರಿ ತರಬೇತಿ ಸಂಸ್ಥೆಗಳು, ಕರ್ನಾಟಕ ರಾಜ್ಯ ವೃತ್ತಿ ತರಬೇತಿ ಹಾಗೂ ಕೌಶಲ್ಯ ಅಭಿವೃದ್ದಿ ನಿಗಮ ಮತ್ತು ಸ್ತ್ರೀ ಶಕ್ತಿ ಒಕ್ಕೂಟಗಳ ಮೂಲಕ ನೀಡಲಾಗುತ್ತದೆ. | ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಜಿಲ್ಲಾ ಪಂಚಾಯತ್ ಕಛೇರಿ ಕೊಟ್ಟಾರ ಮಂಗಳೂರು. ರವರನ್ನು ಸಂಪರ್ಕಿಸಬಹುದು. |
| 13 | ಪ್ರಧಾನ ಮಂತ್ರಿ ಮಾತೃ ವಂದನ ಯೋಜನೆ ಮತ್ತು ರಾಜ್ಯ ಸರಕಾರದ ಮಾತೃಶ್ರೀ ಯೋಜನೆ | ಮಹಿಳೆಯ ಮೊದಲ ಪ್ರಸವದ ಮತ್ತು ನಂತರದ ಸಾಕಷ್ಟು ವಿಶ್ರಾಂತಿಗಾಗಿ ಆಂಶಿಕ ಪರಿಹಾರ ಧನ ಒಟ್ಟು 5000/- ರೂಪಾಯಿಗಳನ್ನು ಸರಕಾರದ ವತಿಯಿಂದ ನೀಡಲಾಗುತ್ತದೆ. ಬಿಪಿಎಲ್ ದಾರರಿಗೆ ಮಾತೃಶ್ರೀ ಯೋಜನೆಯಲ್ಲಿ ರೂ. 6000/- ಪರಿಹಾರ ಧನ ಪಡೆಯಬಹುದು. ಬಿಪಿಎಲ್ ಪಡಿತರ ಹೊಂದಿರುವ ಕುಟುಂಬ ವರ್ಗದವರು ಈ 2 ಯೋಜನೆಗಳ ಸವಲತ್ತನ್ನು ಪಡೆಯಬಹುದು. | ಸಂಬಂಧಪಟ್ಟ ಅಂಗನವಾಡಿ ಕೇಂದ್ರಗಳನ್ನು ಸಂಪರ್ಕಿಸಬಹುದು. |

Scanned with CamScanner

| | | | |
|---|---|---|---|
| 14 | ಪ್ರಾಯೋಜಕತ್ವ ಯೋಜನೆ | 1. ಸತತವಾಗಿ ಸರಕಾರಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಕುಟುಂಬಗಳಿಗೆ ಮರು ಸೇರ್ಪಡೆ ಮಾಡುವ ಮಕ್ಕಳಿಗೆ.<br>2. ಕುಟುಂಬಕ್ಕೆ ಆಧಾರವಾಗಿದ್ದ ಪೋಷಕರು ಜೈಲಿನಲ್ಲಿದ್ದರೆ ಅಂತಹ ಕುಟುಂಬದ ಮಕ್ಕಳಿಗೆ<br>3. ಅನಾಥರು, ಏಕ ಪೋಷಕರು, ವಿಧವೆಯರ ಮಕ್ಕಳಿಗೆ.<br>4. ಕುಷ್ಟ ರೋಗ/ಹೆಚ್‌ಐವಿ ಸೋಂಕಿತ ಪೋಷಕರ ಮಕ್ಕಳಿಗೆ ಈ ಯೋಜನೆಯಡಿಯಲ್ಲಿ ಪ್ರತೀ ಕುಟುಂಬದಲ್ಲಿನ 18 ವರ್ಷದೊಳಗಿನ ಗರಿಷ್ಠ 2 ಮಕ್ಕಳಿಗೆ ಮಾತ್ರ ಪ್ರತೀ ತಿಂಗಳು ರೂ. 1 ಸಾವಿರದಂತೆ ಗರಿಷ್ಟ 3 ವರ್ಷಗಳ ಕಾಲ ಆರ್ಥಿಕ ಬೆಂಬಲ ನೀಡಲಾಗುತ್ತದೆ. | ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಜಿಲ್ಲಾ ಪಂಚಾಯತ್ ಕಛೇರಿ ಕೊಟ್ಟಾರ ಮಂಗಳೂರು. ರವರನ್ನು ಸಂಪರ್ಕಿಸಬಹುದು. |
| 15 | ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ | ಮಹಿಳಾ ಅಭಿವೃದ್ದಿ ಕ್ಷೇತ್ರದಲ್ಲಿ ಉತ್ತಮ ಸಾಧನೆಯನ್ನು ಮಾಡಿದ ಮಹಿಳೆಯರಿಗೆ ಮತ್ತು ಸ್ವಯಂ ಸೇವಾ ಸಂಸ್ಥೆಗಳಿಗೆ ರೂ 10,000/- ಮತ್ತು ರೂ. 25,000/- ನಗದು ಹಾಗೂ ಪ್ರಶಸ್ತಿ ನೀಡಲಾಗುತ್ತದೆ. | ಸರಕಾರದಿಂದ ಅರ್ಜಿ ಸಲ್ಲಿಸಲು ಕರೆ ಕೊಟ್ಟಾಗ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಬಹುದು. |
| 16 | ಶೌರ್ಯ ಸಾಹಸ ಪ್ರಶಸ್ತಿ ಪಡೆದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಆರ್ಥಿಕ ಸಹಾಯ ಧನ | ಇಂತಹ ಪ್ರಶಸ್ತಿ ಪಡೆದ ಮಕ್ಕಳ ವಿದ್ಯಾಭ್ಯಾಸಕ್ಕೆ ಶಾಲಾ ಶುಲ್ಕ ಮತ್ತು ಪುಸ್ತಕ ಖರೀದಿಗಾಗಿ ವರ್ಷಕ್ಕೆ ರೂ. 2000/- ಧನ ಸಹಾಯವನ್ನು ಶಾಲಾ ಶಿಕ್ಷಣ ಮುಗಿಯುವವರೆಗೆ ನೀಡಲಾಗುತ್ತದೆ. | ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಜಿಲ್ಲಾ ಪಂಚಾಯತ್ ಕಛೇರಿ ಕೊಟ್ಟಾರ ಮಂಗಳೂರು. ರವರನ್ನು ಸಂಪರ್ಕಿಸಬಹುದು. |
| 17 | ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ ಮರಣ ಪರಿಹಾರ | ಅಂಗನವಾಡಿ ಕಾರ್ಯಕರ್ತೆಯರಿಗೆ ರೂ. 50,000/- ಮತ್ತು ಸಹಾಯಕಿಯರಿಗೆ ರೂ 30,000/- ಮರಣ ಪರಿಹಾರ ನೀಡಲಾಗುತ್ತದೆ. | ಸಂಬಂಧಪಟ್ಟ ಅಂಗನವಾಡಿ ಕೇಂದ್ರಗಳನ್ನು ಅಥವಾ CDPO ಕಛೇರಿಯನ್ನು ಸಂಪರ್ಕಿಸಬಹುದು.<br>ವಿಳಾಸ: ಪುತ್ತೂರು CDPO ಕಛೇರಿ CTO ಕಛೇರಿ ಎದುರುಗಡೆ ದರ್ಬೆ, ಪುತ್ತೂರು.<br>ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 08251-230388 |
| 18 | ಸಂಧ್ಯಾ ಸುರಕ್ಷಾ ಯೋಜನೆ | ಈ ಯೋಜನೆಯಡಿ 65 ವರ್ಷ ಮೇಲ್ಪಟ್ಟ ಬಿಪಿಎಲ್ ಪಡಿತರ ಚೀಟಿ ಹೊಂದಿದ್ದವರು ಅರ್ಹರಾಗಿರುತ್ತಾರೆ. ರೂ. 1,000/- ಮಾಸಿಕ ಪಿಂಚಣಿ ದೊರೆಯುತ್ತದೆ. | ಸಂಬಂಧಪಟ್ಟ ಗ್ರಾಮ ಪಂಚಾಯತ್ ಅಥವಾ ನಾಡಕಛೇರಿ ಅಥವಾ ತಾಲೂಕು ಕಛೇರಿಯ ಅಟಲ್ ಜೀ ಜನಸ್ನೇಹಿ ಕೇಂದ್ರದಲ್ಲಿ ಈ ಸೌಲಭ್ಯವನ್ನು ಪಡೆದುಕೊಳ್ಳಬಹುದು. |
| 19 | ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಯೋಜನೆ | ಈ ಯೋಜನೆಯಡಿ 60 ವರ್ಷ ಮೇಲ್ಪಟ್ಟ ಬಿಪಿಎಲ್ ಕುಟುಂಬದ ಸದಸ್ಯರಿಗೆ ರೂ. 600/- ಮಾಸಿಕ ಪಿಂಚಣಿ ಮತ್ತು 65 ವರ್ಷ ಮೇಲ್ಪಟ್ಟ ಸದಸ್ಯರಿಗೆ ರೂ 1000/- ಮಾಸಿಕ ಪಿಂಚಣಿ ನೀಡಲಾಗುತ್ತದೆ. | ಸಂಬಂಧಪಟ್ಟ ಗ್ರಾಮ ಪಂಚಾಯತ್ ಅಥವಾ ನಾಡಕಛೇರಿ ಅಥವಾ ತಾಲೂಕು ಕಛೇರಿಯ ಅಟಲ್ ಜೀ ಜನಸ್ನೇಹಿ ಕೇಂದ್ರದಲ್ಲಿ ಈ ಸೌಲಭ್ಯವನ್ನು ಪಡೆದುಕೊಳ್ಳಬಹುದು. |
| 20 | ಮನಸ್ವಿನಿ | ಈ ಯೊಜನೆಯಡಿ 40 ವರ್ಷದಿಂದ 64 ವರ್ಷದ ಅವಿವಾಹಿತ / ವಿಚ್ಛೇದಿತಾ ಸ್ತ್ರೀಯರಿಗೆ ಮಾಸಿಕ ರೂ 600/- ಮಾಸಿಕ ಪಿಂಚಣಿ ನೀಡಲಾಗುತ್ತದೆ. | ಸಂಬಂಧಪಟ್ಟ ಗ್ರಾಮ ಪಂಚಾಯತ್ ಅಥವಾ ನಾಡಕಛೇರಿ ಅಥವಾ ತಾಲೂಕು ಕಛೇರಿಯ ಅಟಲ್ ಜೀ ಜನಸ್ನೇಹಿ ಕೇಂದ್ರದಲ್ಲಿ ಈ ಸೌಲಭ್ಯವನ್ನು ಪಡೆದುಕೊಳ್ಳಬಹುದು. |

Scanned with CamScanner

| | | | |
|---|---|---|---|
| 21 | ವಿಧವಾ ವೇತನ | ಈ ಯೋಜನೆಯಡಿ ವಿಧವೆಯರಿಗೆ 18 ವರ್ಷದಿಂದ 64 ವರ್ಷದವರೆಗೆ ಮಾಸಿಕ ರೂ 600/- ನ್ನು ಪಿಂಚಣಿ ನೀಡಲಾಗುತ್ತದೆ. | ಸಂಬಂಧಪಟ್ಟ ಗ್ರಾಮ ಪಂಚಾಯತ್ ಅಥವಾ ನಾಡಕಛೇರಿ ಅಥವಾ ತಾಲೂಕು ಕಛೇರಿಯ ಅಟಲ್-ಜೀ ಜನಸ್ನೇಹಿ ಕೇಂದ್ರದಲ್ಲಿ ಈ ಸೌಲಭ್ಯವನ್ನು ಪಡೆದುಕೊಳ್ಳಬಹುದು. |
| 22 | ಅಂಗ ವಿಕಲ ಚೇತನ | ಈ ಯೋಜನೆಯಡಿ ಶೇಕಡಾ 40 ರಿಂದ 74 ಅಂಗ ವಿಕಲತೆ ಹೊಂದಿರುವವರಿಗೆ ಮಾಸಿಕ ರೂ. 600/- ಹಾಗೂ ಶೆಕಡಾ 75 ಕ್ಕಿಂತ ಮೇಲ್ಪಟ್ಟು ಅಂಗವಿಕಲತೆ ಹೊಂದಿರುವವರಿಗೆ ಮಾಸಿಕ ರೂ. 1,400/- ಪಿಂಚಣಿ ನೀಡಲಾಗುತ್ತದೆ. | ಸಂಬಂಧಪಟ್ಟ ಗ್ರಾಮ ಪಂಚಾಯತ್ ಅಥವಾ ನಾಡಕಛೇರಿ ಅಥವಾ ತಾಲೂಕು ಕಛೇರಿಯ ಅಟಲ್ ಜೀ ಜನಸ್ನೇಹಿ ಕೇಂದ್ರದಲ್ಲಿ ಈ ಸೌಲಭ್ಯವನ್ನು ಪಡೆದುಕೊಳ್ಳಬಹುದು. |
| 23 | ಮೈತ್ರಿ | ಈ ಯೋಜನೆಯಡಿ ಲಿಂಗತ್ವ ಅಲ್ಪ ಸಂಖ್ಯಾತರಿಗೆ ಮಾಸಿಕ ರೂ. 600/- ಪಿಂಚಣಿ ನೀಡಲಾಗುತ್ತದೆ. | ಸಂಬಂಧಪಟ್ಟ ಗ್ರಾಮ ಪಂಚಾಯತ್ ಅಥವಾ ನಾಡಕಛೇರಿ ಅಥವಾ ತಾಲೂಕು ಕಛೇರಿಯ ಅಟಲ್ ಜೀ ಜನಸ್ನೇಹಿ ಕೇಂದ್ರದಲ್ಲಿ ಈ ಸೌಲಭ್ಯವನ್ನು ಪಡೆದುಕೊಳ್ಳಬಹುದು. |
| 24 | ಎಂಡೋಸಲ್ಫಾನ್ | ಎಂಡೋಸಲ್ಫಾನ್ ಪೀಡಿತ ಶೇಕಡಾ 25 ರಿಂದ ಶೇಕಡಾ 59 ಅಂಗ ವೈಕಲ್ಯತೆ ಹೊಂದಿದವರಿಗೆ ಮಾಸಿಕ 1,500/- ಪಿಂಚಣಿ ಹಾಗೂ ಶೇಕಡಾ 60 ಕ್ಕಿಂತ ಮೇಲ್ಪಟ್ಟು ಅಂಗ ವೈಕಲ್ಯತೆ ಹೊಂದಿರುವವರಿಗೆ ಮಾಸಿಕ 3,000/- ಪಿಂಚಣಿ ನೀಡಲಾಗುತ್ತದೆ. | ಸಂಬಂಧಪಟ್ಟ ಗ್ರಾಮ ಪಂಚಾಯತ್ ಅಥವಾ ನಾಡಕಛೇರಿ ಅಥವಾ ತಾಲೂಕು ಕಛೇರಿಯ ಅಟಲ್ ಜೀ ಜನಸ್ನೇಹಿ ಕೇಂದ್ರದಲ್ಲಿ ಈ ಸೌಲಭ್ಯವನ್ನು ಪಡೆದುಕೊಳ್ಳಬಹುದು. |
| 25 | ರಾಷ್ಟ್ರೀಯ ಕುಟುಂಬ ಸಹಾಯಧನ ಯೋಜನೆ | ಈ ಯೋಜನೆಯಡಿ ಬಿ.ಪಿ.ಎಲ್ ಕುಟುಂಬದ ಏಕೈಕ ದುಡಿಯುವ ಮುಖ್ಯಸ್ಥ ಮೃತಪಟ್ಟಾಗ 1 ಬಾರಿ ರೂ. 20,000/- ಧನ ಸಹಾಯ ನೀಡಲಾಗುತ್ತದೆ. ಸದ್ರಿ ವ್ಯಕ್ತಿಯು 18 ವರ್ಷದಿಂದ 59 ವರ್ಷದೊಳಗಿರಬೇಕು. | ಸಂಬಂಧಪಟ್ಟ ಗ್ರಾಮ ಪಂಚಾಯತ್ ಅಥವಾ ನಾಡಕಛೇರಿ ಅಥವಾ ತಾಲೂಕು ಕಛೇರಿಯ ಅಟಲ್ ಜೀ ಜನಸ್ನೇಹಿ ಕೇಂದ್ರದಲ್ಲಿ ಈ ಸೌಲಭ್ಯವನ್ನು ಪಡೆದುಕೊಳ್ಳಬಹುದು. |
| 26 | ಅಂತ್ಯ ಸಂಸ್ಕಾರ | ಈ ಯೋಜನೆಯಡಿ ಬಿಪಿಎಲ್ ಕುಟುಂಬದ ಸದಸ್ಯ ಮೃತಪಟ್ಟಾಗ ಅಂತ್ಯ ಸಂಸ್ಕಾರಕ್ಕೆ ರೂ . 5,000/- ಧನ ಸಹಾಯ ನೀಡಲಾಗುತ್ತದೆ. | ಸಂಬಂಧಪಟ್ಟ ಗ್ರಾಮ ಪಂಚಾಯತ್ ಅಥವಾ ನಾಡಕಛೇರಿ ಅಥವಾ ತಾಲೂಕು ಕಛೇರಿಯ ಅಟಲ್ ಜೀ ಜನಸ್ನೇಹಿ ಕೇಂದ್ರದಲ್ಲಿ ಈ ಸೌಲಭ್ಯವನ್ನು ಪಡೆದುಕೊಳ್ಳಬಹುದು. |

Scanned with CamScanner